ಸಿಗುತ್ತವೆ. ಪರಿಸರಕ್ಕೆ ಪೂರಕವಾದ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಬಗ್ಗೆ ನಾವು ಈಗಾಗಲೇ ಒಂದು ಸುತ್ತಿನ ಮಾತುಕತೆಯನ್ನು ಮಾಡಿದ್ದೇವೆ, ಇನ್ನೊಮ್ಮೆ ನಮ್ಮ ಶಾಸಕರನ್ನೆಲ್ಲಾ ಕರೆದು, ಯಾವ ರೀತಿಯಾಗಿ ಸಹಾಯ ಮಾಡಿದರೆ ಸರ್ಕಾರದಿಂದ ಅಲ್ಲಿ ಅನುಕೂಲವಾಗುತ್ತದೆ ಎಂಬುದನ್ನು ತಮ್ಮ ಜೊತೆ ಮಾತನಾಡಿ, ಐಟಿ, ಬಿಟಿ, ಸಣ್ಣ ಕೈಗಾರಿಕೆಗಳು ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ವಿಶ್ವೇಶ್ವರ ಹೆಗಡೆಯವರು ಹೇಳಿದರು, ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ದಿಕ್ಕಿನಲ್ಲಿ ಸರ್ಕಾರ ಖಂಡಿತವಾಗಿಯೂ ಪ್ರೋತ್ಸಾಹ ನೀಡುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಮೋಹನ್‌ಕೃಷ್ಣ ಶೆಟ್ಟಿ : ಅಲ್ಲಿ ತದಡಿಯಲ್ಲಿ ಉಷ್ಣತಾ ಸ್ಥಾವರವನ್ನು ಸ್ಥಾಪನೆ ಮಾಡುವುದರ ಬಗ್ಗೆ ನಮ್ಮ ವಿರೋಧವಿದೆ, ನಮ್ಮ ಇಡೀ ಜಿಲ್ಲೆಯ ನಾಗರಿಕರು, ಜನಪ್ರತಿನಿಧಿಗಳು ಅದೇ ಅಭಿಪ್ರಾಯವನ್ನು ಹೊಂದಿದ್ದು, ಅದು ಸ್ಥಾಪನೆಯಾಗಬಾರದೆಂದು ಮತ್ತೊಮ್ಮೆ ಸರ್ಕಾರಕ್ಕೆ ನಾವು ಮನವಿ ಮಾಡುತ್ತೇವೆ, ಮತ್ತೆ ಅದು ಅಲ್ಲಿ ಆಗುವುದಕ್ಕೆ ಬಿಡುವುದಿಲ್ಲ. ತಾವು ಬೇಕಾದರೆ ಬಂದರು ಅಭಿವೃದ್ಧಿ ಮಾಡಿ, ಪ್ರವಾಸೋದ್ಯಮವನ್ನು ಗೋವಾ, ಕೇರಳ ರಾಜ್ಯದಲ್ಲಿರುವಂತೆ ಅಭಿವೃದ್ಧಿ ಮಾಡಿ, ಐಟಿ, ಬಿಟಿ ಇಂಡಸ್ಟ್ರೀಸ್ ತನ್ನಿ, ಮೆರಿನ್ ಪಾರ್ಕ್ ಮಾಡಿ, ತೋಟಗಾರಿಕೆ ತನ್ನಿ, ಈ ಸ್ಥಾವರಕ್ಕೆ ನಾವು ಖಂಡಿತಾ ಬಿಡುವುದಿಲ್ಲ, ಪರಿಸರ ಪೂರಕವಾದ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ ನಮ್ಮ intellectuals ದೇಶವಿದೇಶಗಳಲ್ಲಿದ್ದಾರೆ. ನಮ್ಮ ಜಿಲ್ಲೆಯಲ್ಲಿಲ್ಲ, ಉಡುಪಿ, ಮಂಗಳೂರುಗಳಲ್ಲಿ ಬಹಳಷ್ಟು ಇಂಡಸ್ಟ್ರೀಸ್ ಬಂದಿದ್ದರಿಂದ ಅಲ್ಲಿ ಅಭಿವೃದ್ಧಿಗೆ ಬಹಳ ಕಾರಣವಾಗಿದೆ, ನಮ್ಮ ಜಿಲ್ಲೆ ಬಹಳ ಹಿಂದುಳಿದಿದೆ, ಆದುದರಿಂದ ಸರ್ಕಾರ ಆ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಖಂಡಿತವಾಗಿ ಆ ಬಗ್ಗೆ ಸರ್ಕಾರ ಗಮನವನ್ನು ಹರಿಸುತ್ತದೆ. ಮಾನ್ಯ ಶಾಸಕರು ಹೇಳಿದ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಆ ಇಂಡಸ್ಟ್ರೀಸ್‌ಗೆ ನಾವು ಪ್ರೋತ್ಸಾಹವನ್ನು ನೀಡುತ್ತೇವೆ.

ವಿಷಯ : ವಿಶೇಷ ತಹಸೀಲ್ದಾರ್‌ರವರಿಗೆ ಹೆಚ್ಚಿನ ಅಧಿಕಾರ ನೀಡುವ ಬಗ್ಗೆ.

196 (709) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಿಶೇಷ ತಹಶೀಲ್ದಾರ್‌ರವರಿಗೆ ಯಾವ ಯಾವ ಅಧಿಕಾರಗಳನ್ನು ನೀಡಲಾಗಿದೆ.

ಆ) ಆಹಾರ, ಪಡಿತರ ಚೀಟಿ ವಿತರಣೆ, ಪ್ರಕೃತಿ ವಿಕೋಪ ಪರಿಹಾರ ವಿತರಣೆ ಮೊದಲದ ಅಧಿಕಾರವನ್ನು ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ, ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಆದೇಶ ಸಂಖ್ಯೆ:ಆರ್.ಡಿ. 204. ಎಎಸ್‌ಡಿ : 2003 ದಿ: 31–1–2004ರಲ್ಲಿ ಅಧಿಕಾರ ನೀಡಿರುವ ಪ್ರತಿಯನ್ನು ಅನುಬಂಧಿಸಲಾಗಿದೆ.

ಆ) ಈ ಪ್ರಸ್ತಾವನೆ ಸದ್ಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

Proceedings of the Government of Karnataka

Sub: Providing intrastructural facilities and delegations of Powers to the Special Tahsildars in Revenue Department.

Read : 1) Government Order No: RD 196 ASD 2002, Dated: 15-6-2002
2) Government Order No: RD 109 ASD 97. Dated: 08-7-2002
3) Government Order No: RD 207 ASD 2002, Dated: 03-10-2003
4) Government Order No: RD 179 ASD 2002, Dated :28-1-2003
5) Government Order No: RD 09 ASD 2003, Dated: 16-1-2003
6) Government Order No: RD 09 ASD 2003, Dated: 18-2-2003
7) Government Order No: RD 09 ASD 2003, Dated: 22-2-2003
8) Government Order No: RD 09 ASD 2003, Dated: 05-3-2003
9) Government Order No: RD 09 ASD 2003, Dated: 22-4-2003
10) Government Order No: RD 09 ASD 2003, Dated: 28-6-2003
11) Government Order No: RD 194 ASD 2003, Dated: 27-6-2003
12) Government Order No: RD 09 ASD 2003, Dated: 13-8-2003
13) Government Order No: RD 09 ASD 2003, Dated: 28-10-2003

Preamble :

On the request of vanous organisations. Legislators, people's representatives and considering the recommendations of Sri Vasudeva Rao. Sri Hundekar and Sri .P.C. Gaddigowdar Committees constituted for Districts ad Taluks re-organisation in the state, Government have posted 25 Special Tahsildars in following places in the State in the interest of administrationl.

Sl. No.	Created/Shifted Post	District
1	Hanur	Chamarajanagar
2	Mudabidre	Dakshina Kannada
3	Guledagudda	Bagalkote
4	Bynder	Udupi

5	Talikote	Bijapur
6	Kurugodu	Bellary
7	Chitaguppa	Bidar
8	Nidagudni	Bijapur
9	Babaleshwar	Bijapur
10	Laxmoshwar	Gagad
11	Ilkal	Bagalkote
12	Kittur	Belgaum
13	Gajendragad	Gadag
14	Maski	Raichur
15	Kadaba	Dakshina Kannada
16	Chadachana	Bijapur
17	Karatagi	Koppal
18	Yadrami	Gulbarga
19	K.G.F.	Kolar
20	Brahmavara	Udupi
21	Kalagi	Gulbarga
22	Hunasagi	Gulbarga
23	Vadagera	Gulbarga
24	Gulbarga North	Gulbarga
25	Gurumitkal	Gulbarga

To facilitate these special Tahsildars to function full fledgedly in Taluks, Government have decided to delegate some powers with certain infrastructures to these special Tahsildars and hence the following order.

Government Order No: RD 204 ASD 2003, Bangalore, Dated: 31-01-2004

In exercise of the powers conterred by Sub-sectin (1) of section (1) of section 195 of the Karnataka Land Revenue Act. 1964, the Government are pleased to delegate the following powers to Special Tahsildars in Revenue Department within their jurisdiction.

1) Maintenance of if Record of Rights, 'J' slips, phodi cases and matters under section-127, 128, 129 of the Karnataka Land Revenue Act. 1964.
2) Sanction of OAP, PHP, DWP, Pensions for freedom fighters etc.,
3) Irrigation, Forest, PWD, Food Matters.
4) Solvency certificates, stamp refund. VPC motters.
5) Survival Certificates.
6) Miscellaneous Government dues recovery.
7) Mallers connected with Land acquisition including RHS.
8) Issue of OBC Caste certificates.
9) Issue of income certificates Domicile Certificates

Further the Deputy Commissioner concerned shall ensure that Special Tahsildars shall share the suporting staff with the existing Tahsildars.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯಲ್ಲಿ ವಿಶೇಷ ತಹಸೀಲ್ದಾರರಿಗೆ ಯಾವ್ಯಾವ ಅಧಿಕಾರವನ್ನು ಕೊಡಲಾಗಿದೆ ಎಂಬ ಪಟ್ಟಿಯನ್ನು ಕೊಟ್ಟಿದ್ದಾರೆ, ನಾನು ಸರ್ಕಾರವನ್ನು ಕೋರಿದ್ದು ಆಹಾರ, ಪಡಿತರ ಚೀಟಿ ವಿತರಣೆ, ಪ್ರಕೃತಿ ವಿಕೋಪ ಎಲ್ಲಾ ಕೆಲಸವನ್ನು ಮಾಡುವ ಅಧಿಕಾರವನ್ನು ವಿಶೇಷ ತಹಸೀಲ್ದಾರ್‌ಗೆ ಕೊಡಬೇಕೆಂದು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಕಂದಾಯ ಮಂತ್ರಿಯಾಗಿದ್ದಾಗ ವಿಶೇಷ ತಹಸೀಲ್ದಾರ್‌ಗಳನ್ನು ಕೊಟ್ಟರು. ಆದರೆ ಅಂದು ಒಂದು ಅಭಿಪ್ರಾಯವೇನಿತ್ತೆಂದರೆ ಚುನಾವಣೆ ಮತ್ತು ಕಾನೂನು ಸುವ್ಯವಸ್ಥೆ ಈ ಎರಡನ್ನು ಬಿಟ್ಟು ಉಳಿದ ಅಧಿಕಾರವನ್ನು ವಿಶೇಷ ತಹಸೀಲ್ದಾರ್‌ಗೆ ಕೊಡಬೇಕೆಂದು. ಚುನಾವಣೆ ಮತ್ತು ಕಾನೂನು ಸುವ್ಯವಸ್ಥೆ ರೆಗ್ಯುಲರ್ ತಹಸೀಲ್ದಾರ್‌ಗೆ ಇರಲಿ, ಉಳಿದಿದ್ದನ್ನು ವಿಶೇಷ ತಹಸೀಲ್ದಾರ್‌ಗೆ ಕೊಟ್ಟರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಕಡತವನ್ನು ಪುನಃ ಉಡುಪಿಗೆ ತೆಗೆದುಕೊಂಡು ಹೋಗಬೇಕು. ನಮ್ಮಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿವೆ, ಕುಂದಾಪುರದಲ್ಲಿ ಎರಡು ಇದೆ. ಜನರಿಗೆ ತುಂಬಾ ಸಹಾಯವಾಗುತ್ತದೆ, ದಯವಿಟ್ಟು ಇದನ್ನು ಪರಿಗಣಿಸಿ, ತಾವು ಉತ್ತರದಲ್ಲಿ ಸದ್ಯದಲ್ಲಿ ಇಲ್ಲವೆಂದು ಹೇಳಿದ್ದೀರಿ, ಸದ್ಯದಲ್ಲೇ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಪ್ರಕಾಶ್ ಹೆಗಡೆಯವರೇನು ಪ್ರಶ್ನೆ ಕೇಳಿದ್ದಾರೆ, ವಿಶೇಷ ತಹಸೀಲ್ದಾರ್‌ಗೆ ನೀಡಲಾಗಿರುವ ಅಧಿಕಾರದ ಬಗ್ಗೆ ಒಂದು ಪಟ್ಟಿಯನ್ನು ಉತ್ತರದಲ್ಲಿ ಕೊಟ್ಟಿದ್ದೇವೆ. ದಿನಾಂಕ: 31.1.2004 ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿ ಕೆಲವೊಂದು ಕೆಲಸ ಕಾರ್ಯಗಳನ್ನು ಈ ವಿಶೇಷ ತಹಸೀಲ್ದಾರ್ ಮಾಡುವುದು, ಅದರಲ್ಲಿ, Maintenance of Record of rights, slips, phodi cases and matters under Section 127, 128, 129 of the Karnataka Land Revenue Act; sanction of OAP, PHP, DWP, Pensions for freedom fighters, Irrigation, Forest, PWD Food matters, Solvency certificates, stamp refund, VPC matters, Survival certificates, Miscellaneous Government dues recovery, Matters connected with Land Acqusition, Issue of OBC Caste Certificates, Issue of income certificates, ಹೆಚ್ಚು ಕಡಿಮೆ ಎಲ್ಲಾ ಅಧಿಕಾರವನ್ನು ಇವತ್ತು ನಾವು ವಿಶೇಷ ತಹಸೀಲ್ದಾರ್‌ಗೆ ಕೊಟ್ಟಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಲಾ ಅಂಡ್ ಆರ್ಡರ್ ಹಾಗೂ ಚುನಾವಣೆ ಬಿಟ್ಟು ಉಳಿದಿದ್ದನ್ನು ಕೊಡಿ. ಈಗ ಆಹಾರ, ಪಡಿತರ ವಿತರಣೆ, ಪ್ರಕೃತಿವಿಕೋಪ ತೊಂದರೆಯಾದಾಗ, ಅದನ್ನೆಲ್ಲಾ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, 31.4.2004 ರ ಆದೇಶದನ್ವಯ ವಿಶೇಷ ತಹಶೀಲ್ದಾರ್‌ಗೆ ಈ ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಆಹಾರ ಮತ್ತು ಪಡಿತರ ಚೀಟಿ ವಿತರಣೆ, ಮತ್ತು ಪ್ರಕೃತಿ ವಿಕೋಪ ಪರಿಹಾರ ವಿತರಣೆ, ಪ್ರಕೃತಿ ವಿಕೋಪ ಪರಿಹಾರ ವಿತರಣೆ ಬಗ್ಗೆ, ಎಲ್ಲಿಯೇ ಅನಾಹುತಗಳಾದರೆ ಅಲ್ಲಿರುವಂತಹ ತಹಶೀಲ್ದಾರ್‌ರವರು ತಮ್ಮ ಸಿಬ್ಬಂದಿ ಮುಖಾಂತರ ಅಲ್ಲಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿಕೊಂಡು, ಪಂಚನಾಮ ಮಾಡಿ, ಎಷ್ಟು ಲಾಸ್ ಆಗಿದೆ ಏನು ಎನ್ನುವ ಬಗ್ಗೆ ಡಿಸಿಯವರಿಗೆ ರಿಪೋರ್ಟ್ ಮಾಡುವುದು, ಡಿಸಿಯವರು ನಮ್ಮ ರಾಜ್ಯ ಸರ್ಕಾರಕ್ಕೆ ರಿಪೋರ್ಟ್ ಮಾಡುವುದು, ಈ ವ್ಯವಸ್ಥೆ ಇದೆ. ಅವರು ಮಾಡಿದೇ ಮಾಡುತ್ತಾರೆ. ಇನ್ನು ಆಹಾರ ಮತ್ತು ಪಡಿತರ ಚೀಟಿ ವಿತರಣೆ ಬಗ್ಗೆ ಹೇಳುವುದಾದರೆ, ಆಹಾರ ಇಲಾಖೆ ಒಂದು ಸ್ವತಂತ್ರ್ಯವಾದ ಕೆಲಸ ನಿರ್ವಹಣೆ ಮಾಡುತ್ತಿರುವುದರಿಂದ, ಈ ಆಹಾರ ಮತ್ತು ಪಡಿತರ ಚೀಟಿ ವಿತರಣೆ ಕಾರ್ಯ ಆಹಾರ ಇಲಾಖೆಗೆ ಬರುವುದರಿಂದ, ನೇರವಾಗಿ ಅದಕ್ಕೇ ಒಂದು ಸಿಬ್ಬಂದಿ ಇದೆ. ಅವರು ಆ ಕೆಲಸವನ್ನು ಮಾಡುತ್ತಾರೆ. ಅದನ್ನು ಕಂದಾಯ ಇಲಾಖೆಯವರಾದ ನಾವು ಮಾಡಲಿಕ್ಕೆ ಸಾಧ್ಯವಿಲ್ಲ, ಆ ಕೆಲಸವನ್ನು ಅವರು ಮಾಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪ್ರೋಸೀಡಿಂಗ್ಸ್ ಎಲ್ಲಾ ಆಂಗ್ಲ ಭಾಷೆಯಲ್ಲಿ ಇದೆ. ಇಂಗ್ಲೀಷ್ ಕಾಪಿ ಕೊಟ್ಟಿದ್ದೀರಿ. ನೀವು ಅದನ್ನು ನೋಡಲೇ ಇಲ್ಲ. ಅಧ್ಯಕ್ಷರೆ, ನೀವು ಹೀಗೆಯೇ ಸಡಿಲ ಬಿಟ್ಟರೆ ಕರ್ನಾಟಕದಲ್ಲಿ ಕನ್ನಡ ನಡೆಯುವುದೇ ಇಲ್ಲ. ನಿಮ್ಮ ಆಸನದಿಂದ ಹೊರಗೆ ಕಳುಹಿಸುತ್ತೇವೆಂದು ತಾವು ಆದೇಶ ಮಾಡಿದ್ದಿರಿ. ಇಂಗ್ಲೀಷ್‌ನಲ್ಲಿ ಉತ್ತರ ಹಾಕಿದ್ದಾರೆ. ನಿಮ್ಮ ನಡವಳಿಕೆಗಳೆಲ್ಲವೂ ಅಲ್ಲಿ ಇಂಗ್ಲೀಷ್‌ನಲ್ಲಿಯೇ ನಡೆಯುತ್ತವೆ. ಮೊನ್ನೆ ನಮ್ಮ ಪ್ರಧಾನ ಮಂತ್ರಿಗಳು

ಬರುವ ಪೂರ್ವ ದಿವಸ ಪೂರ್ವಭಾವಿ ಮೀಟಿಂಗ್ ಕರೆದಿದ್ದರು. ಮುಖ್ಯ ಕಾರ್ಯದರ್ಶಿಯವರು ಕರೆದ ಸಭೆಗೆ ನಾನೂ ಕೂಡ ಹೋಗಿದ್ದೆ. ಬರೀ ಇಂಗ್ಲೀಷ್‌ನಲ್ಲಿಯೇ ನಡೆಸಿದರು. ಒಬ್ಬರೂ ಕನ್ನಡ ಒಂದು ಶಬ್ದ ಮಾತನಾಡಲಿಲ್ಲ. ಎಲ್ಲಾ ಇಂಗ್ಲೀಷ್‌ನಲ್ಲಿಯೇ ನಡೆಯಿತು. ಹೀಗಾದರೆ ಈ ರಾಜ್ಯದಲ್ಲಿ ಯಾವಾಗ ಕನ್ನಡ ಬರುವುದು? ನೀವೇ ಕನ್ನಡ ಗಂಡುಮೆಟ್ಟಿನ ಸ್ಥಳದಿಂದ ಬಂದಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ, ಕೆಲವೊಂದು ವಿಷಯಗಳನ್ನು ಇಂಗ್ಲೀಷ್‌ನಲ್ಲಿ ಕೊಟ್ಟಿದ್ದಾರೆ, ಇನ್ನು ಮೇಲೆ ನಾನು ಕಂದಾಯ ಇಲಾಖೆ ಇರಬಹುದು, ಅಥವಾ ಸರ್ಕಾರದ ಯಾವುದೇ ಇಲಾಖೆ ಇರಬಹುದು, ಉತ್ತರ ಕೊಡತಕ್ಕಂಥದ್ದು ಇರಬಹುದು, ಅದಕ್ಕೆ ಲಗತ್ತಿಸಿರುವಂತಹ ಪ್ರೊಸೀಡಿಂಗ್ಸ್ ಇರಬಹುದು, ಎಲ್ಲವೂ ಕಟ್ಟುನಿಟ್ಟಾಗಿ ಕನ್ನಡದಲ್ಲಿ ನಡೆಯುವಂತೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಒಂದು ಇಲಾಖೆ ಅಲ್ಲ, ಸರ್ಕಾರದ ಆಡಳಿತ ಭಾಷೆ ಕನ್ನಡ ಎಂದು ಇರುವುದು. ಅದು ಏನೂ ಆಗುತ್ತಿಲ್ಲ. ಅದರ ಬಗ್ಗೆ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತಿದ್ದೇವೆ, ಇದೆಲ್ಲಾ ಬರೀ ಘೋಷಣೆಯಲ್ಲಿದೆಯೇ ಹೊರತು, ಪ್ರಾಮಾಣಿಕವಾಗಿ ಆಡಳಿತ ಭಾಷೆ ಕನ್ನಡದಲ್ಲಿ ಜಾರಿಯಾಗಿಲ್ಲ. ಪ್ರತಿ ಇಲಾಖೆ 100ಕ್ಕೆ 90 ಭಾಗ ಕನ್ನಡ ಬಿಟ್ಟು ಇಂಗ್ಲೀಷ್ ಭಾಷೆಯಲ್ಲಿ ನಡೆಯುತ್ತಿದೆ. ತಾವು ದಯವಿಟ್ಟು ಎಲ್ಲಾ ಇಲಾಖೆಗಳೂ ತಾವು ಹೇಳಬೇಕೆಂದು ತಮ್ಮ ಮೂಲಕ ಹೇಳುತ್ತೇನೆ. ಉಪ ಮುಖ್ಯಮಂತ್ರಿಗಳೂ ಇದ್ದಾರೆ, ಗೃಹ ಸಚಿವರೂ ಇದ್ದಾರೆ, ಅವರೂ ಹಿರಿಯರಾಗಿದ್ದಾರೆ, ಅವರಿಗೂ ಹೇಳುತ್ತಿದ್ದೇನೆ, ಮತ್ತು ಶೆಟ್ಟರ್‌ರವರಿಗೂ ಹೇಳುತ್ತಿದ್ದೇನೆ. ಇನ್ನು ಮುಂದೆ ನಿಮ್ಮ ಸರ್ಕಾರದ ಸಮಗ್ರ ಆಡಳಿತ ಕನ್ನಡದಲ್ಲಿ ನಡೆಯವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಚಾರಗಳನ್ನು ಎತ್ತಿದ್ದಾರೆ, ಹಿಂದೆ ವಿಧಾನ ಸಭೆಯಲ್ಲಿ ಆಗಾಗ ಚರ್ಚೆ ಕೂಡ ಆಗಿದೆ, ಹೀಗಾಗಿ ಇದು ಒಂದು ಹಂತದಲ್ಲಿ ಸಂಪೂರ್ಣವಾಗಿ ಅನುಷ್ಠಾನ ಮಾಡುವಂಥಾದ್ದು ಆಗುತ್ತಿಲ್ಲ ಎನ್ನುವುದು ಒಂದು ಖೇದಕರವಾದ ಸಂಗತಿ. ಹೀಗಾಗಿ ಇದು ಮುಂದೆ ಆಗದ ರೀತಿಯಲ್ಲಿ ಎಲ್ಲವೂ ಇವತ್ತು ವಿಧಾನ ಸಭೆಯಲ್ಲಿದ್ದಂತಹ ಪ್ರೊಸೀಡಿಂಗ್ಸ್ ಇರಬಹುದು, ಉತ್ತರ ಕೊಡುವಂಥದ್ದು ಇರಬಹುದು, ಆಡಳಿತ ವ್ಯವಸ್ಥೆಯ ಎಲ್ಲಾ ಹಂತದಲ್ಲಿ ಕನ್ನಡವನ್ನು ಅನುಷ್ಟಾನ ಮಾಡಲಿಕ್ಕೆ ನಾವು ಬದ್ದರಿದ್ದೇವೆ. ಎಲ್ಲಿಯೇ ಲೋಪದೋಷಗಳಾದರೂ ಅದನ್ನು ಸರಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಮಟ್ಟದಲ್ಲಿ ಕೆಲವು ಅಧಿಕಾರಿಗಳನ್ನು ಕೊಡತಕ್ಕಂಥದ್ದರ ಬಗ್ಗೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಪ್ರಸ್ತಾಪ ಮಾಡಿದ್ದಾರೆ. ಅದು ಒಂದು ವಿಷಯ. ಆದರೆ 2005–06ರಲ್ಲಿ ಅದನ್ನು ಸಂಪೂರ್ಣವಾಗಿ ತಾಲ್ಲೂಕುಗಳಾಗಿ ಕನ್‌ವರ್ಟ್ ಮಾಡಬೇಕೆಂದು ಇತ್ತು. ಕೊನೇ ಪಕ್ಷ 2006–07 ರಲ್ಲಿ ಆದರೂ ಕೂಡ ಯಾವ ಯಾವ ತಾಲ್ಲೂಕುಗಳು ಈಗಾಗಲೇ ಗುರುತಿಸಿ ಸ್ಪೆಷಲ್ ತಹಶೀಲ್ದಾರ್ ಎಂದು ಹಾಕಿದ್ದಾರೆ, ಅದನ್ನು ಪರ್ಮನೆಂಟ್ ಮಾಡಿ. ಏಕೆಂದರೆ, ಅನೇಕ ಸಾರಿ ಕೇಂದ್ರದಿಂದ ಬರತಕ್ಕಂತಹ ಸ್ಕೀಮ್‌ಗಳು ಏನಿವೆ, ಅವುಗಳಿಗೆ ಒಂದು ಯೂನಿಟ್ ಎಂದು ಮಾಡಿ ಹಣವನ್ನು ಕೊಡುತ್ತಾರೆ. ಇಲ್ಲ ಡಿಸ್ಟ್ರಿಕ್ಸ್ ಆ್ಯಸ್ ಎ

ಯೂನಿಟ್ ಎಂದು ಮಾಡಿ ಕೊಡುತ್ತಾರೆ. ಅದಕ್ಕಾಗಿ ಈಗಾಗಲೇ ಪ್ರಕಟವಾದಂತಹ ಮತ್ತು ಸ್ಪೆಷಲ್ ತಹಸೀಲ್ದಾರ್ ಮಾಡಿ ಎಂದು ಏನು ಕೊಟ್ಟಿದ್ದಾರೆ, ಅದಕ್ಕೆ ನೀವು ಪರ್ಮನೆಂಟಾಗಿ ಮಾಡಿದರೆ, ಅದಕ್ಕೆ ಜ್ಯೂರಿಸ್ಡಿಕ್ಷನ್ ಫಿಕ್ಸ್ ಆಗಿದೆ, ಜನಸಂಖ್ಯೆ ಫಿಕ್ಸ್ ಆಗಿದೆ, ಹೆಡ್‌ಕ್ವಾರ್ಟರ್ಸ್ ಫಿಕ್ಸ್ ಆಗಿದೆ, ಸ್ಪೆಷಲ್ ತಹಶೀಲ್ದಾರ್‌ರನ್ನು ತಾವು ಹಾಕಿದ್ದೀರಿ, ಎಲ್ಲಾ ಕೂಡ ಆಗಿದೆ. ಅದಕ್ಕಾಗಿ ದಯವಿಟ್ಟು ಅದನ್ನು ಪರ್ಮನೆಂಟ್ ಮಾಡಿದರೆ, ಒಳ್ಳೆಯದಾಗುತ್ತದೆ. ಈ ಹಿಂದೆ ವಾಟಾಳ್ ನಾಗರಾಜ್‌ರವರು ಪ್ರಯತ್ನ ಮಾಡಿ ಚಾಮರಾಜನಗರ ಜಿಲ್ಲೆಯನ್ನೇ ಮಾಡಿಕೊಂಡು ಬಿಟ್ಟರು. ನನಗೂ ಬಿಟ್ಟು ಎಲ್ಲರಿಗೂ ಕೈ ಬಿಟ್ಟು, ಅವರು ಹೋಗಿ ಜೆ.ಹೆಚ್. ಪಟೇಲರ ಬಳಿ ಕುಳಿತು ಮಾಡಿಸಿಕೊಂಡು ಬಿಟ್ಟರು. ಕನಿಷ್ಟ ಈ ತಹಶೀಲ್ದಾರ್ ಆಫೀಸಾದರೂ ತಾವು ಮಾಡಿ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಏನು ಒಂದು ವಿಚಾರವನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸರ್ಕಾರದ ಸಹಮತ ಇದೆ. ಈಗಾಗಲೇ, ವಾಸುದೇವರಾವ್‌ರವರ ಒಂದು ಕಮಿಟಿ, ಹುಂಡೇರ್ಕಾರ್‌ರವರ ಕಮಿಟಿ, ಗದ್ದೀಗೌಡರ ಕಮಿಟಿ, ಈ ಎಲ್ಲಾ ಆಯೋಗಗಳು ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಪುನರ್‌ವಿಂಗಡನೆ ಮಾಡುವ ಬಗ್ಗೆ ಆಯೋಗಗಳನ್ನು ಏನು ನೇಮಕ ಮಾಡಲಾಗಿತ್ತು, ಅವರು ವರದಿಗಳನ್ನು ಕೊಟ್ಟಿದ್ದಾರೆ. ಆ ವರದಿಗಳು ಇವತ್ತು ಸರ್ಕಾರದ ಮುಂದಿವೆ. ಆ ಆಯೋಗಗಳ ವರದಿಯನ್ವಯ, ಇವತ್ತು ಯಾವ ಯಾವ ತಾಲ್ಲೂಕುಗಳನ್ನು ಪುನರ್ ವಿಂಗಡನೆ ಮಾಡಿ ಹೊಸ ತಾಲ್ಲೂಕುಗಳನ್ನು ಮಾಡಬಹುದು ಎನ್ನುವ ಬಗ್ಗೆ ಸರ್ಕಾರದ ಮುಂದೆ ವಿಚಾರ ಇದೆ. ಆ ಹಿನ್ನೆಲೆಯಲ್ಲಿ ವಿಶೇಷ ತಹಶೀಲ್ದಾರ್‌ಗಳನ್ನು ಎಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ನಿಯೋಜನೆ ಮಾಡಿದ್ದೇವೆ, ಆ ಎಲ್ಲಾ ತಾಲ್ಲೂಕುಗಳು ತಾಲ್ಲೂಕುಗಳಾಗಬೇಕೆನ್ನುವ ಉದ್ದೇಶದಿಂದ ಮಾಡಿರತಕ್ಕಂಥದ್ದು. ಆದರೆ ಒಂದೇ ಒಂದು ಅಡಚಣೆ ಇದೆ. ತಾಲ್ಲೂಕುಗಳನ್ನು ಕ್ರಿಯೇಟ್ ಮಾಡುವುದಕ್ಕೆ ಎಲ್ಲಿಂದಲೂ ಯಾವುದೇ ವಿರೋಧ ಇಲ್ಲ. ಸರ್ಕಾರವೂ ಕೂಡ ಅದಕ್ಕೆ ಬದ್ಧವಾಗಿದೆ. ಒಂದು ಸಮಸ್ಯೆ ಏನಾಗಿದೆ, ಇವತ್ತು ಡೀ ಲಿಮಿಟೇಷನ್ ಕಮಿಟಿಯವರು ಈ ವಿಧಾನ ಸಭೆಗಳ ಕ್ಷೇತ್ರಗಳ ಪುನರ್ ವಿಂಗಡನೆ ನಡೆಯುತ್ತಿರುವುದರಿಂದ ಡೀ ಲಿಮಿಟೇಷನ್ ಕಮಿಟಿಯವರೇ ಒಂದು ಆದೇಶವನ್ನು ಕೊಟ್ಟಿದ್ದಾರೆ. ಈ ಪ್ರೋಸೆಸ್ ಎಲ್ಲಾ ಮುಗಿಯುವವರೆಗೂ ಯಾವುದೇ ಒಂದು ಹೊಸ ತಾಲ್ಲೂಕುಗಳನ್ನಾಗಲಿ, ಹೊಸ ಅಡ್ಮಿನಿಸ್ಟ್ರೇಷನ್ ಯೂನಿಟ್‌ಗಳನ್ನು ಮಾಡುವಂಥಾದ್ದಾಗಲಿ, ಇವನ್ನು ಯಾವುದೂ ಮಾಡಬಾರದೆನ್ನುವ ಸೂಚನೆ ಪ್ರಕಾರ ಇವತ್ತು ಸರ್ಕಾರ ಮಾಡುತ್ತಿಲ್ಲ. ಅದೊಂದು ಅಡಚಣೆ ಬಿಟ್ಟರೆ ಈ ತಾಲ್ಲೂಕುಗಳನ್ನು ಮಾಡುವ ಬಗ್ಗೆ ಯಾವುದೇ ಅಡಚಣೆ ಇಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಸಿ.ಟಿ. ರವಿ. ಇಲ್ಲ.

ಅರಸೀಕೆರೆ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿಗೆ ಪರಿಹಾರ

198 (1061) ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಸೀಕೆರೆ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;